# ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಶಿಕ್ಷಣ

ಡಾ. ಲೋಕೇಶ

ಸ್ವಾಮಿ ವಿವೇಕಾನಂದರು ಶಿಕ್ಷಣವನ್ನು ಕುರಿತು ಅತ್ಯಂತ ಕಾಳಜಿ ವಹಿಸಿ ಹಲವು ಬಗೆಯ ಪ್ರಾಯೋಗಿಕ ವಿಚಾರ, ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ. ಭಾರತ ನಿರ್ಮಾಣ ಕಾರ್ಯದಲ್ಲಿ ಈ ಚಿಂತನೆಗಳು ಕಾರ್ಯಗತವಾಗಿದ್ದಿದ್ದರೆ, ಭಾರತ ಇಂದಿಗೆ ಇನ್ನೆಷ್ಟೋ ಮುಂದೆ ಸಾಗುತ್ತಿತ್ತು ಎಂಬುದು ನಿಸ್ಸಂದೇಹ. ಈ ಕುರಿತು ಬರೆದಿರುವ ಲೇಖಕರು ಮೈಸೂರಿನಲ್ಲಿ ರಾಜ್ಯಶಾಸ್ತ್ರ ಉಪನ್ಯಾಸಕರಾಗಿದ್ದಾರೆ.

ರಾಮಕೃಷ್ಣ ಪರಮಹಂಸರ ಪರಮ ಶಿಷ್ಯರಾದ, ವೀರ ಸಂನ್ಯಾಸಿಯಾದ, ಮಹಾತ್ಯಾಗಿ, ರಸಯೋಗಿ ಸ್ವಾಮಿ ವಿವೇಕಾನಂದರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ತಿಳಿದುಕೊಳ್ಳುವುದಕ್ಕೆ ಮೊದಲು ಸಂಕ್ಷಿಪ್ತವಾಗಿ ಅವರ ಜನನ, ಬಾಲ್ಯ ಮತ್ತು ಪರಿವ್ರಾಜಕ ಸಂನ್ಯಾಸಿ ಜೀವನ ತಿಳಿದುಕೊಳ್ಳುವುದು ಇಂದಿನ ಯುವ ವಿದ್ಯಾರ್ಥಿ ಸಮುದಾಯಕ್ಕೆ ಅತ್ಯಂತ ಆವಶ್ಯಕ.

ಶ್ರೀ ಸ್ವಾಮಿ ವಿವೇಕಾನಂದ ಮಹಾಪುರುಷರು ಕ್ರಿ. ಶ. ೧೮೬೩ರ ಜನವರಿ ೧೨ನೇ ತೇದಿ ಕಲ್ಕತ್ತೆ ಮಹಾನಗರದಲ್ಲಿ ಜನಿಸಿದರು. ತಂದೆ ವಿಶ್ವನಾಥ ದತ್ತ ಮತ್ತು ತಾಯಿ ಭುವನೇಶ್ವರಿ ದೇವಿ. ತಾಯಿ ಮಗನನ್ನು ಮೊದಲು 'ವೀರೇಶ್ವರ' ಎಂಬ ಹೆಸರಿನಿಂದ ಕರೆದಳು. ನಂತರ ಅನ್ನಪ್ರಾಶನ ಸಮಯದಲ್ಲಿ ಬಾಲಕನ ಪ್ರಚಲಿತ ನಾಮವು 'ನರೇಂದ್ರನಾಥ ದತ್ತ' ಎಂದಾಯಿತು.

ಬಾಲಕ ನರೇಂದ್ರನಾಥನು ಬಹಳ ತುಂಟನಾಗಿದ್ದನು. ಸ್ವಾತಂತ್ರ್ಯದಲ್ಲಿ ಅವನಿಗೆ ಬಹಳ ಪ್ರೀತಿ. ಶಾಸನವಾಕ್ಯ ಪ್ರಯೋಗಕ್ಕೆ, ಭಯಪ್ರದರ್ಶನಕ್ಕೆ ಅವನು ಮಣಿಯುತ್ತಿರಲ್ಲಿಲ್ಲ. 'ಶಿವ ಶಿವ' ಎಂದು ಹೇಳಿ ತಲೆಯ ಮೇಲೆ ನೀರನ್ನು ಚಿಮುಕಿಸಿದರೆ ಮಾತ್ರ ಅವನು ಮಂತ್ರ ಮುಗ್ಧನಾದವನಂತೆ ತಟಸ್ಥನಾಗಿಬಿಡುತ್ತಿದ್ದ. ಮಗನಿಗೆ ಸ್ನಾನ ಮಾಡಿಸುತ್ತಿದ್ದಾಗಲಂತೂ ತಾಯಿ ಬಹು ಪೀಡಿತಳಾಗುತ್ತಿದ್ದಳು. ಅವನ ತುಂಟತನವನ್ನು ತಡೆಯಲಾರದೆ ಭುವನೇಶ್ವರಿದೇವಿ, 'ಮಗನನ್ನು ಕೊಡು ಎಂದು ನಾನು ಬೇಡಿದರೆ ಶಿವನು ಮಂಗನನ್ನು ಕೊಟ್ಟಿದ್ದಾನೆ' ಎಂದು ತಮಾಷೆ ಮಾಡುತ್ತಿದ್ದಳು. ನರೇಂದ್ರನಿಗೆ ತನ್ನ ಇಬ್ಬರು ಅಕ್ಕಂದಿರನ್ನು ಪೀಡಿಸುವುದು ಎಂದರೆ ಬೆಲ್ಲ ತಿಂದಷ್ಟು ಸಂತೋಷ. ತಾಯಿ ನರೇಂದ್ರನನ್ನು ಪ್ರೀತಿಯಿಂದ 'ಬಿಲೇ' ಎಂದು ಕರೆಯುತ್ತಿದ್ದಳು.

ಆಜನ್ಮ ಬ್ರಹ್ಮಚಾರಿಯೂ, ಮಹಾವೀರನೂ, ಚಿರಂಜೀವಿಯೂ, ಕಾಮರೂಪಿಯೂ, ವಜ್ರಶರೀರಿಯೂ, ಶ್ರೀರಾಮಚಂದ್ರನ ಪರಮ ಭಕ್ತನೂ ಆದ ಸ್ವಾಮಿ ವಿವೇಕಾನಂದರು



೧೯೦೨ರ ಜುಲೈ ೪ನೇ ತಾರೀಖು ತೀವ್ರತರ ಕಾಯಿಲೆಯಿಂದ ಇಹಲೋಕವನ್ನು ತ್ಯಜಿಸಿದರು.

ಇಂತಹ ಮಹಾನ್ ವ್ಯಕ್ತಿಯ ಜೀವನ ಚರಿತ್ರೆ ಯುವ ವಿದ್ಯಾರ್ಥಿಗಳ ಮೇಲೆ ಆರೋಗ್ಯಕರ ಪ್ರಭಾವ ಬೀರುವುದರಲ್ಲಿ ಯಾವುದೇ ಅನುಮಾನವಿಲ್ಲ. ಆದ ಕಾರಣ ಅವರ ಶೈಕ್ಷಣಿಕ ಕೊಡುಗೆಗಳ ವಿವರಣೆಗಿಂತ ಮೊದಲು ಅವರ ಸಂಕ್ಷಿಪ್ತ ಬಾಲ್ಯ ಜೀವನವನ್ನು ಪರಿಚಯಿಸಲು ಪ್ರಯತ್ನ ಮಾಡಿದ್ದೇನೆ.

ಈಗ ವಿವೇಕಾನಂದರ ಶೈಕ್ಷಣಿಕ ವಿಚಾರವಾಗಿ ಚರ್ಚಿಸುವುದಾದರೆ, ಅವರು ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅಪಾರ. ಅವರ ಪ್ರಕಾರ ಶಿಕ್ಷಣ ಎಂದರೆ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆ, 'All round development of individual'. ಶಿಕ್ಷಣ ಎಂದರೆ ಕೇವಲ ಪದವಿಯನ್ನು ಪಡೆದುಕೊಳ್ಳುವುದು ಎಂದರ್ಥವಲ್ಲ ಬದಲಾಗಿ ವ್ಯಕ್ತಿಯು ಸಮಾಜದಲ್ಲಿ ಸುಸಂಸ್ಕೃತನಾಗಿ ಧೈರ್ಯವಾಗಿ ಜೀವನ ನಡೆಸುವಂತೆ ಮಾಡುವ ಸಾಧನ ಎಂದರ್ಥ. ಸ್ವಾಮಿ ವಿವೇಕಾನಂದರು ಹಿಂದೂಧರ್ಮದ ಸಾರವನ್ನು ಪ್ರಪಂಚಕ್ಕೆ ತಿಳಿಸಿದ ಏಕೈಕ ವ್ಯಕ್ತಿ; ಅದರಲ್ಲಿಯೂ ಇವರು ತಮ್ಮ ಶಿಕ್ಷಣ ತತ್ವಗಳ ಮೂಲಕ ಆದಿ ಶಂಕರರ ಅದ್ವೈತ ವೇದಾಂತ ತತ್ತ್ವವನ್ನು ಯುವ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಅದರಲ್ಲಿ ಪ್ರಮುಖವಾದವು ಎಂದರೆ ಬೋಧನೆ-ಕಲಿಕೆಯಲ್ಲಿ

ಏಕಾಗ್ರತೆ ಮತ್ತು ಧ್ಯಾನ. ಇಂದಿನ ಯುವ ಪೀಳಿಗೆಯಲ್ಲಿ ಏಕಾಗ್ರತೆ ಮತ್ತು ಧ್ಯಾನದ ಕೊರತೆಯು ಎದ್ದು ಕಾಣುತ್ತಿದೆ.

ಸ್ವಾಮಿ ವಿವೇಕಾನಂದರು ನಮಗೆ ಎರಡು ಅಸ್ತ್ರಗಳನ್ನು ಕೊಟ್ಟಿದ್ದಾರೆ ಅವುಗಳೇ ಧ್ಯಾನ ಮತ್ತು ಏಕಾಗ್ರತೆ. ಇವೆರಡನ್ನು ಇಂದಿನ ಯುವ ವಿದ್ಯಾರ್ಥಿಗಳು ಸರಿಯಾಗಿ ಸದುಪಯೋಗ ಪಡಿಸಿಕೊಂಡರೆ ಅತ್ಯುತ್ತಮವಾದ ಶಿಕ್ಷಣವನ್ನು ಪಡೆದುಕೊಂಡ ಂತೆಯೇ ಸರಿ. ಏಕಾಗ್ರತೆ ಮತ್ತು ಧ್ಯಾನ ಇವು ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ದಾರಿದೀಪವಾಗಿ, ವ್ಯಕ್ತಿಯನ್ನು ಸುಸಂಸ್ಕೃತ ನಾಗರಿಕನನ್ನಾಗಿ ಸೃಷ್ಟಿಸಿ, ತನ್ನ ಕಾಲ ಮೇಲೆ ತಾನು ನಿಲ್ಲುವಂತೆ ಮಾಡುತ್ತವೆ. ವಿದ್ಯಾರ್ಥಿಗಳು ಮೈಸೂರಿನ ರಾಮಕೃಷ್ಣ ಆಶ್ರಮಕ್ಕೆ ಬೆಳಿಗ್ಗೆ ಮತ್ತು ಸಂಜೆ ಭೇಟಿ ನೀಡಿ, ಧ್ಯಾನ ಮಾಡುವುದರ ಮೂಲಕ ಏಕಾಗ್ರತೆಯನ್ನು ಸಂಪಾದಿಸಿ, ಅದನ್ನು ಶಿಕ್ಷಣದಲ್ಲಿ ಬಂಡವಾಳವನ್ನಾಗಿ ತೊಡಗಿಸಿ, ಅತ್ಯುತ್ತಮವಾದ ಶಿಕ್ಷಣವನ್ನು ಪಡೆದುಕೊಳ್ಳುವುದರ ಮೂಲಕ ಸತ್ಪ್ರಜೆಯಾಗಬಹುದು. ವಿವೇಕಾನಂದರ ಪ್ರಕಾರ ಸಮಾಜದಲ್ಲಿ ಆರೋಗ್ಯಕರ ಬದಲಾವಣೆ ತರಬೇಕಾದರೆ ಶಿಕ್ಷಣ ಎಂಬ ಆಯುಧವನ್ನು ಬಳಸಬೇಕು ಮತ್ತು ಈ ಆಯುಧವನ್ನು ಮಹಿಳೆಯರು ಉಪಯೋಗಿಸುವಂತಾಗಬೇಕು. ಅದಕ್ಕೋಸ್ಕರ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಬೇಕು ಎಂದರು. ಈ ಹಾದಿಯಲ್ಲೇ ಸಹೋದರಿ ನಿವೇದಿತಾ ಕಲ್ಕತ್ತದಲ್ಲಿ ಹೆಣ್ಣು ಮಕ್ಕಳ ಶಾಲೆಯನ್ನು ತೆರೆದರು.

ಧ್ಯಾನ ಮತ್ತು ಏಕಾಗ್ರತೆ ಶಿಕ್ಷಣದಲ್ಲಿ ಸುದರ್ಶನ ಚಕ್ರದಂತೆ ಕೆಲಸ ಮಾಡುತ್ತದೆ. ಆದುದರಿಂದ ಯುವ ವಿದ್ಯಾರ್ಥಿಗಳು ಶಿಸ್ತುಬದ್ಧವಾಗಿ ಇವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಧ್ಯಾನ ಮತ್ತು ಏಕಾಗ್ರತೆಯ ಪರಿಕಲ್ಪನೆಯನ್ನು ಪಾಶ್ಚಾತ್ಯರಿಗೆ ಮೊದಲು ಪರಿಚಯಿಸಿದ ಪ್ರಥಮ ವ್ಯಕ್ತಿಯೇ ಸ್ವಾಮಿ ವಿವೇಕಾನಂದರು. ವಿವೇಕಾನಂದರ ಪರಿಣಾಮಕಾರಿ ಶೈಕ್ಷಣಿಕ ಚಿಂತನೆಗಳಿಂದ ಮತ್ತು ೧೮೯೩ರ ಚಿಕಾಗೋ ಭಾಷಣದಿಂದ ಪಾಶ್ಚಿಮಾತ್ಯ ದೇಶದವರು ಪ್ರಭಾವಿತರಾದರು.

ರೋಮನ್ ಕ್ಯಾಲೆಂಡರ್‌ಗೆ ಅನುಸಾರವಾಗಿ ಸ್ವಾಮೀಜಿ ಜನ್ಮದಿನವಾದ ಜನವರಿ ೧೨ನ್ನು ನಾವು 'ರಾಷ್ಟ್ರೀಯ ಯುವ ದಿನ'ವನ್ನಾಗಿ ಆಚರಣೆ ಮಾಡಲು ಪ್ರಮುಖ ಕಾರಣವೆಂದರೆ ವಿವೇಕಾನಂದರು ಯುವ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೀಡಿರುವ ಕೊಡುಗೆಗಳು. ಸರ್ಕಾರದ ಉದ್ದೇಶವೂ ಕೂಡ ಸಹ ವಿವೇಕಾನಂದರ ಆದರ್ಶ ಶಿಕ್ಷಣ ನೀತಿಯನ್ನು ಯುವಕರು ಮೈಗೂಡಿಸಿ ಕೊಂಡು ಭಾರತ ದೇಶವನ್ನು ಮತ್ತಷ್ಟು ಪ್ರಗತಿಯ ಪಥದಲ್ಲಿ ಕೊಂಡೊಯ್ಯಲಿ ಎಂಬುವುದೇ ಆಗಿರುತ್ತದೆ.

ಸ್ವಾಮಿ ವಿವೇಕಾನಂದರು ಆಧ್ಯಾತ್ಮಿಕ ಮತ್ತು ಸಮಾಜ ಸುಧಾರಣಾ ಕ್ಷೇತ್ರದಲ್ಲಿ ಎಷ್ಟು ಸಮರ್ಥರಾಗಿ ಕಾರ್ಯನಿರ್ವಹಿಸಿ ಯಶಸ್ವಿಯಾಗಿದ್ದರೋ, ಅಷ್ಟೇ ಸಮರ್ಥವಾಗಿ ಶಿಕ್ಷಣತಜ್ಞರಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಹಸಿದ ಹೊಟ್ಟೆಗೆ ಶಿಕ್ಷಣ ನೀಡಲು ಸಾಧ್ಯವಿಲ್ಲ ಎಂದು ಹೇಳಿ, ''ಮೊದಲು ಹೊಟ್ಟೆ ತುಂಬಿಸಿ, ನಂತರ ಶಿಕ್ಷಣ ನೀಡಿ. ಆಗ ವಿದ್ಯಾರ್ಥಿ ಸೂರ್ಯನಂತೆ ಪ್ರಜ್ವಲಿಸುತ್ತಾನೆ'' ಎಂದಿದ್ದರು. ಅದರಂತೆ ಪ್ರಸ್ತುತ ಎಲ್ಲಾ ಶಾಲೆಗಳಲ್ಲಿ ಬೆಳಿಗ್ಗೆ ಬಿಸಿ ಬಿಸಿ ಹಾಲು ಮತ್ತು ಮಧ್ಯಾಹ್ನ ಬಿಸಿಯೂಟವನ್ನು ನೀಡುವುದರ ಮೂಲಕ ಉತ್ತಮ ಶಿಕ್ಷಣವನ್ನು ನೀಡಲಾಗುತ್ತಿದೆ. ಇದು ವಿವೇಕಾನಂದರ ದೂರದೃಷ್ಟಿಯಲ್ಲದೆ ಮತ್ತಿನ್ನೇನು? ಇವರು ಹೇಳಿರುವಂತೆ, ನಮ್ಮಲ್ಲಿ ಈಗಾಗಲೇ ಅಡಗಿರುವ ಪರಿಪೂರ್ಣತೆಯನ್ನು ವ್ಯಕ್ತಗೊಳಿಸುವುದೇ ವಿದ್ಯಾಭ್ಯಾಸದ ಗುರಿ.

ಒಟ್ಟಿನಲ್ಲಿ ಹೇಳುವುದಾದರೆ ಸ್ವಾಮಿ ವಿವೇಕಾನಂದರು ಶಿಕ್ಷಣ ತಜ್ಞರಾಗಿ ನೀಡಿರುವ ಶಿಕ್ಷಣ ನೀತಿಗಳನ್ನು ಯುವಪೀಳಿಗೆ ಚಾಚೂ ತಪ್ಪದೆ ಅನುಸರಿಸಿದರೆ ಭಾರತ ದೇಶ ಮತ್ತಷ್ಟು ಪ್ರಗತಿಯ ಪಥದತ್ತ ದಾಪುಗಾಲು ಹಾಕಿ ವಿಶ್ವಗುರು ಆಗುವುದರಲ್ಲಿ ಮತ್ತು ಸನಾತನ ಹಿಂದೂಧರ್ಮ ಮತ್ತಷ್ಟು ಗಟ್ಟಿಯಾಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

## ನನ್ನ ದೋಣಿಯ ದಡಮುಟ್ಟಿಸೋ

ನನ್ನ ದೋಣಿಯ ದಡಮುಟ್ಟಿಸೋ
ಬೇಡುವೆ ನಿನ್ನ ದೊರೆ,
ಬಲು ನೊಂದೆನೀ ಭವದಲಿ
ಶೋಕ ಶಂಕೆಗಳ ಕಳೆ, ಇದೆ ಎನ್ನ ಮೊರೆ!
ಅಷ್ಟಬಂಧನಗಳು ಕಷ್ಟಕೊಡುತಿವೆ
ದೂರವಾಗಲಿ ದುಃಖದ ಹೊರೆ!
ಜಗವನೆಲ್ಲ ಕೊಚ್ಚಿಸಿಕೊಂಡು
ಹೋಗುತಿದೆ ಚೌರಾಸೀ ತೊರೆ!
ಮೀರಾದೊರೆ ಗಿರಿಧರನಾಗರ,
ಆವಾಗ ಮನಕೆ ಬರಲಿ ಕೊರೆ!

## ಎನ್ನ ಮನೆಗೆ ಬಾರೋ

ಎನ್ನ ಮನೆಗೆ ಬಾರೋ
ಸುಂದರ ಶ್ಯಾಮವರ್ಣ
ನೀ ಬಾರದೆ ಸುಖವಿಲ್ಲ
ಮೈಯಾಗಿದೆ ಹಳದಿ ಪರ್ಣ !
ನನ್ನಾಶೆ ಬೇರಿಲ್ಲ, ನಿನ್ನದೊಂದೆ ಧ್ಯಾನ
ಮೀರಾಪ್ರಭು, ಬೇಗ ಬಂದು ಕೂಡ,
ಕಾಪಾಡೆನ್ನ ಮಾನ !

— ಮೀರಾಬಾಯಿ

*('ಮೀರಾ ಪದಾವಲಿ' ಗ್ರಂಥದಿಂದ)*